**ಭಾರತ ಮತ್ತು ಐಸ್‌ಲ್ಯಾಂಡ್ ನಡುವಿನ 4 ನೇ ವಿದೇಶಾಂಗ ಕಚೇರಿ ಸಮಾಲೋಚನೆಗಳು**

ಮಾರ್ಚ್ 24, 2026

ಭಾರತ ಮತ್ತು ಐಸ್‌ಲ್ಯಾಂಡ್ ನಡುವಿನ 4 ನೇ ವಿದೇಶಾಂಗ ಕಚೇರಿ ಸಮಾಲೋಚನೆಗಳನ್ನು (FOC) 2026 ಮಾರ್ಚ್ 23 ರಂದು ರೇಕ್ಜಾವಿಕ್‌ನಲ್ಲಿ ನಡೆಸಲಾಯಿತು. ಭಾರತದ ಕಡೆಯ ನೇತೃತ್ವವನ್ನು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ (ಪಶ್ಚಿಮ) ಶ್ರೀ ಸಿಬಿ ಜಾರ್ಜ್ ಮತ್ತು ಐಸ್‌ಲ್ಯಾಂಡ್‌ನ ಕಡೆಯ ನೇತೃತ್ವವನ್ನು ಐಸ್‌ಲ್ಯಾಂಡ್ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಶಾಶ್ವತ ರಾಜ್ಯ ಕಾರ್ಯದರ್ಶಿ ಶ್ರೀ ಮಾರ್ಟಿನ್ ಐಯೋಲ್ಫ್‌ಸನ್ ವಹಿಸಿದ್ದರು. 2023 ಮಾರ್ಚ್‌ನಲ್ಲಿ ಭಾರತವು ಕೊನೆಯ ಸುತ್ತಿನ FOC ಯನ್ನು ಆಯೋಜಿಸಿತ್ತು.

2. ಕಳೆದ ಕೆಲ ವರ್ಷಗಳಲ್ಲಿ ಗಾಢಗೊಂಡಿರುವ ರಾಜಕೀಯ ಮತ್ತು ಅಧಿಕೃತ ಮಟ್ಟಗಳಲ್ಲಿ ನಿಯಮಿತ ವಿನಿಮಯಗಳಿಂದ ಗುರುತಿಸಲಾದ ನಿಕಟ ಮತ್ತು ಸ್ನೇಹ ಸಂಬಂಧಗಳನ್ನು ಭಾರತ ಮತ್ತು ಐಸ್‌ಲ್ಯಾಂಡ್ ಆನಂದಿಸುತ್ತವೆ. 2025 ಅಕ್ಟೋಬರ್ 1 ರಿಂದ ಜಾರಿಗೆ ಬಂದ ಭಾರತ-EFTA ವ್ಯಾಪಾರ ಮತ್ತು ಆರ್ಥಿಕ ಪಾಲುದಾರಿಕೆ ಒಪ್ಪಂದವು ಸಂಬಂಧಗಳಿಗೆ ಹೊಸ ಆಯಾಮವನ್ನು ಸೇರಿಸಿದೆ. ಐಸ್‌ಲ್ಯಾಂಡ್ ಯುರೋಪಿಯನ್ ಫ್ರೀ ಟ್ರೇಡ್ ಏರಿಯಾ(EFTA) ದ ನಾಲ್ಕು ಸದಸ್ಯರಲ್ಲಿ ಒಂದಾಗಿದೆ.

3. FOC ಯ ಸಮಯದಲ್ಲಿ, ರಾಜಕೀಯ, ವ್ಯಾಪಾರ ಮತ್ತು ಹೂಡಿಕೆ, ಭಾರತ-EFTA-TEPA ಅನುಷ್ಠಾನ, ಜಿಯೋಥರ್ಮಲ್, ಮೀನುಗಾರಿಕೆ, ಸಾಮರ್ಥ್ಯ ವರ್ಧನೆ, ಸಂಸ್ಕೃತಿ ಮತ್ತು ಜನರ ನಡುವಿನ ಬಾಂಧವ್ಯ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿ ಸಹಕಾರದ ಸ್ಥಿತಿಯನ್ನು ಎರಡೂ ಕಡೆಯವರು ಸಮಗ್ರವಾಗಿ ಪರಿಶೀಲಿಸಿದರು. ಎರಡೂ ಕಡೆಯವರು 2025 ರಲ್ಲಿ ದ್ವಿಪಕ್ಷೀಯ ವ್ಯಾಪಾರದ ಹೆಚ್ಚಳ ಮತ್ತು ಭಾರತದಲ್ಲಿ ಐಸ್‌ಲ್ಯಾಂಡ್ ಕಂಪನಿಗಳ ಹೂಡಿಕೆಯನ್ನು ಒಪ್ಪಿಕೊಂಡರು. ಬಹುಪಕ್ಷೀಯ ವೇದಿಕೆಯಲ್ಲಿ ವಿಶೇಷವಾಗಿ UN ನಲ್ಲಿ ಸೇರಿದಂತೆ ಭವಿಷ್ಯದ ಸಹಕಾರದ ದಿಕ್ಕಿನ ಬಗ್ಗೆ ವಿವರವಾದ ಚರ್ಚೆಗಳನ್ನು ನಡೆಸಲಾಯಿತು.

4. ಭಾರತ ಮತ್ತು ಐಸ್‌ಲ್ಯಾಂಡ್‌ನ ನೆರೆಹೊರೆಗಳಲ್ಲಿನ ಬೆಳವಣಿಗೆಗಳು ಸೇರಿದಂತೆ ಪರಸ್ಪರ ಆಸಕ್ತಿಯ ಪ್ರಾದೇಶಿಕ ಮತ್ತು ಅಂತಾರಾಷ್ಟ್ರೀಯ ವಿಷಯಗಳ ಬಗ್ಗೆ ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಳ್ಳಲು FOC ಅವಕಾಶವನ್ನು ಒದಗಿಸಿತು. ಬಹುಪಕ್ಷೀಯ ತೊಡಗುವಿಕೆಗಳ ಪ್ರಾಮುಖ್ಯತೆ ಮತ್ತು ಜಾಗತಿಕ ಸವಾಲುಗಳ ಬಗ್ಗೆ ಮುಂದುವರಿದ ಮಾತುಕತೆಯನ್ನು ಎರಡೂ ಕಡೆಯವರು ಒತ್ತಿಹೇಳಿದರು.

5. ರೇಕ್ಜಾವಿಕ್ ಭೇಟಿಯಲ್ಲಿ ಕಾರ್ಯದರ್ಶಿ(ಪಶ್ಚಿಮ)ಯವರು, ಐಸ್ಲ್ಯಾಂಡ್‌ನ ವಿದೇಶಾಂಗ ಸಚಿವೆ ಗೌರವಾನ್ವಿತ ಮಿಸ್ Þorgerður Katrín Gunnarsdóttir ಮತ್ತು ಐಸ್ಲ್ಯಾಂಡ್ ಪಾರ್ಲಿಮೆಂಟ್‌ನ ಸ್ಪೀಕರ್ ಗೌರವಾನ್ವಿತ ಮಿಸ್ Þórunn Sveinbjarnardóttir ಅವರನ್ನು ಕೂಡಾ ಭೇಟಿ ಮಾಡಿದರು. ಅವರು ರೇಕ್ಜಾವಿಕ್‌ನಲ್ಲಿ ನೆಲೆಸಿರುವ ಭಾರತೀಯ ಸಮುದಾಯದೊಂದಿಗೆ ಸಂವಹನ ನಡೆಸಿದರು ಮತ್ತು ಭಾರತ-ಐಸ್ಲ್ಯಾಂಡ್ ಸಂಬಂಧಗಳನ್ನು ಬಲಪಡಿಸುವಲ್ಲಿ ಅವರ ಕೊಡುಗೆಗಳನ್ನು ಪ್ರಶಂಸಿಸಿದರು.

6. ನವದೆಹಲಿಯಲ್ಲಿ ಪರಸ್ಪರ ಅನುಕೂಲಕರ ದಿನಾಂಕದಂದು ಮುಂದಿನ ಸುತ್ತಿನ ವಿದೇಶಾಂಗ ಕಚೇರಿ ಸಮಾಲೋಚನೆಗಳನ್ನು ನಡೆಸಲು ಎರಡೂ ಕಡೆಯವರು ಒಪ್ಪಿಕೊಂಡರು.

ರೇಕ್ಜಾವಿಕ್

ಮಾರ್ಚ್ 24, 2026